8. ಗಮನ ಸೆಳೆಯುವ ಸೂಚನೆಗಳು

1) ವಿಷಯ: ಯಶವಂತಪುರ ವಿಧಾನಸಭಾ ಕ್ಷೇತ್ರದ ರಾಮುಹಳ್ಳಿ, ಚಿಕ್ಕನಹಳ್ಳಿ ಮತ್ತು ಚೋಳನಾಯಕನಹಳ್ಳಿಯ ಗ್ರಾಮ ಪಂಚಾಯತಿ ಪರಿಮಿತಿಯಲ್ಲಿ ನಡೆಯುತ್ತಿರುವ ಕಲ್ಲುಗಣಿಗಾರಿಕೆಯಿಂದ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ಎಸ್.ಟಿ. ಸೋಮಶೇಖರ್ (ಯಶವಂತಪುರ):– ಮಾನ್ಯ ಅಧ್ಯಕ್ಷರೆ, ನನ್ನ ಯಶವಂತಪುರ ವಿಧಾನ ಸಭಾ ಕ್ಷೇತ್ರದ ರಾಮುಹಳ್ಳಿ, ಚಿಕ್ಕನಹಳ್ಳಿ ಮತ್ತು ಚೋಳನಾಯಕನಹಳ್ಳಿಯ ಗ್ರಾಮ ಪಂಚಾಯತಿ ಪರಿಮಿತಿಯಲ್ಲಿ ನಡೆಯುತ್ತಿರುವ ಕಲ್ಲುಗಣಿಗಾರಿಕೆಯಿಂದ ತೊಂದರೆಯುಂಟಾಗುತ್ತಿದೆ. ಸುಮಾರು 18 ರಿಂದ 20 ವರ್ಷದಿಂದ ಊರಿನಲ್ಲಿ ಕೆಲವರು permission ತೆಗೆದುಕೊಂಡು ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆ ಮತ್ತು ಇನ್ನೂ ಕೆಲವರು permission ಪಡೆದುಕೊಳ್ಳದೆಯೇ ಈ ಕೆಲಸವನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಸುಮಾರು ಮನೆಗಳು ಬಿರುಕು ಬಿಟ್ಟಿರುವ ಬಗ್ಗೆ ಅನೇಕ ದೂರುಗಳನ್ನು ಕೊಟ್ಟರೂ ಕೂಡ ಏನೂ ಪ್ರಯೋಜನವಾಗಲಿಲ್ಲ. ಅದಕ್ಕಾಗಿ ನಿಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತಾ ಅವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ಇದಕ್ಕೆ ಉತ್ತರ ಬಂದಿಲ್ಲ. ನಿಮಗೆ ಉತ್ತರವನ್ನು ಅವರಿಂದ ಕೊಡಿಸುತ್ತೇನೆ.

ಶ್ರೀ ಎಸ್.ಟಿ. ಸೋಮಶೇಖರ್:– ಮಾನ್ಯ ಅಧ್ಯಕ್ಷರೆ, Thank you.

ಅಧ್ಯಕ್ಷರು:– ಗಮನ ಸೆಳೆಯುವ ಸೂಚನೆ ಕೊಟ್ಟಿರುವ ಯು.ಬಿ. ಬಣಕಾರ್ ಈಗ ಇಲ್ಲಿ ಇಲ್ಲ. ಕೆ.ಜಿ. ಬೋಪಯ್ಯನವರೆ ನೀವು ಕೇಳಿ.

2) ವಿಷಯ: ಮೈಸೂರು ಬಂಟ್ವಾಳ ರಸ್ತೆಯಲ್ಲಿ ಭಾರೀ ವಾಹನಗಳ ಸಂಚಾರವನ್ನು ನಿಷೇಧಿಸಿದ್ದರೂ, ಭಾರಿ ವಾಹನಗಳು ಸಂಚರಿಸುತ್ತಿರುವುದರಿಂದ ಸಂಪಾಜೆ ಭಾಗದಲ್ಲಿ ರಸ್ತೆ ಕುಸಿದಿದ್ದು. ಆ ರಸ್ತೆಯನ್ನು ದುರಸ್ತಿ ಗೊಳಿಸುವ ಬಗ್ಗೆ.